E-off

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಗುರುತಿನ ಸಂಖ್ಯೆ: (ಸಿ.ಐ.ಎನ್): ಯು40109ಕೆಎ2002ಎಸ್‌ಜಿಸಿ030425
ಕಂಪನಿಯ ಅಧಿಕೃತ ಕಛೇರಿ: ಆಡಳಿತ ಕಛೇರಿ, 'ಮೆಸ್ಕಾಂ., ಭವನ' ಕಾವೂರು ಅಡ್ಡ ರಸ್ತೆ,
ಬಿಜೈ.ಅಂಚೆ ಪೆಟ್ಟಿಗೆ ಸಂಖ್ಯೆ: 1130, ಮಂಗಳೂರು-575004
ಇ-ಮೇಲ್:cru.mescom@gmail.com
ಅಂತರ್ಜಾಲ: www.mescom.karnataka.gov.in
ದೂರವಾಣಿ ಸಂಖ್ಯೆ: 0824-2885761

ನಂ : MESCOM-TECH0DSM/7/2021-TECH ದಿನಾಂಕ : 18 AUG 2021

SP | RF | C | OP | H
Mode No : ..................
e office No : ..................
Scan : ..................
No of Pages : ..................

## ಸುತ್ತೋಲೆ

ವಿಷಯ: ಇಂಧನ ಉಳಿತಾಯ ಹಾಗೂ ಡಿ.ಎಸ್.ಎಂ. ಕುರಿತು ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ: ಅ.ಇಂ(ತಾಂ)/ಕಾನಿಇಂ(ತಾಂ)/ಡಿಎಸ್‌ಎಮ್/2018-19/13886-907 ದಿನಾಂಕ 20.12.2018.
2. ಈ ಕಛೇರಿ ಪತ್ರ ಸಂಖ್ಯೆ : ಅ.ಇಂ(ತಾಂ)/ಕಾನಿಇಂ(ತಾಂ)/ಡಿಎಸ್‌ಎಮ್/2019-20/9113-38 ದಿನಾಂಕ 30.01.2020.
3. ಸುತ್ತೋಲೆ ಸಂಖ್ಯೆ: ಅ.ಇಂ(ತಾಂ)/ಕಾನಿಇಂ(ತಾಂ)/ಸಕಾನಿಇಂ(ಡಿಎಸ್‌ಎಂ)/19-20/CYS-38 ದಿನಾಂಕ 18.02.2020.
4. ಜಕಾತಿ ದರ ಆದೇಶ 2021.
5. ಅಧೀಕ್ಷಕ ಇಂಜಿನಿಯರ್(ವಿ)(ವಾಣಿಜ್ಯ), ಆಡಳಿತ ಕಛೇರಿ, ಮವಿಸಕಂ, ಮಂಗಳೂರು ರವರ ಆಂತರಿಕ ಟಿಪ್ಪಣಿ ಸಂಖ್ಯೆ: MESCOM-COML0RA/66/2021-COML/I/4828/2021 ದಿನಾಂಕ 15.07.2021.
6. ಈ ಕಛೇರಿ ಕಡತ ಸಂಖ್ಯೆ : MESCOM-TECH0DSM/7/2021-TECH ಹಾಗೂ ಅನುಮೋದಿತ ದಿನಾಂಕ

***********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಜಕಾತಿ ದರ ಪರಿಷ್ಕೃತ ಆದೇಶ 2021ರಲ್ಲಿ ಇಂಧನ ಉಳಿತಾಯ ಹಾಗೂ ಡಿ.ಎಸ್.ಎಂ. ಕುರಿತಂತೆ ಹಲವಾರು ನಿರ್ದೇಶನಗಳನ್ನು ನೀಡಿದ್ದು, ಮೆಸ್ಕಾಂ ಕಛೇರಿಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ಈ ಮೂಲಕ ಸೂಚಿಸಲಾಗಿದೆ.

1. ಮೆಸ್ಕಾಂ ವ್ಯಾಪ್ತಿಯಲ್ಲಿನ ಎಲ್ಲಾ ಕಛೇರಿಗಳಲ್ಲಿನ ಸಾಂಪ್ರದಾಯಿಕ ದೀಪಗಳನ್ನು (incandescent bulbs/CFL/fluorescent tubelights) ಎಲ್.ಇ.ಡಿ ಬಲ್ಬ್ /ಟ್ಯೂಬ್ ಲೈಟ್‌ಗಳಿಂದ ಬದಲಾಯಿಸುವುದು ಹಾಗೂ ಫ್ಯಾನು(Fans)ಗಳನ್ನು ಅಳವಡಿಸುವಾಗ ಇಂಧನ ದಕ್ಷತೆಯುಳ್ಳ ಫ್ಯಾನ್‌ಗಳನ್ನು ಮಾತ್ರ ಅಳವಡಿಸುವುದು.
2. ಕಛೇರಿ/ಸಿಬ್ಬಂದಿ ಕ್ವಾರ್ಟರ್ಸ್‌ಗಳ ನೀರಿನ ಅವಶ್ಯಕತೆಗಾಗಿ ಬಾವಿಗಳಿಗೆ /ಕೊಳವೆ ಬಾವಿಗಳಿಗೆ ಪಂಪುಗಳನ್ನು ಅಳವಡಿಸುವಾಗ ಸ್ಟಾರ್ ರೇಟೆಡ್ ಪಂಪುಗಳನ್ನು ಮಾತ್ರ ಅಳವಡಿಸುವುದು.
3. ಕಛೇರಿಗಳಲ್ಲಿ ಹಾಳಾದ ಹವಾನಿಯಂತ್ರಣಾ ಉಪಕರಣಗಳನ್ನು ಬದಲಾಯಿಸುವಾಗ ಅಥವಾ ಹೊಸ ಹವಾನಿಯಂತ್ರಣಾ ಉಪಕರಣಗಳನ್ನು ಅಳವಡಿಸುವಾಗ ಬಿ.ಇ.ಇ 5 ಸ್ಟಾರ್ ರೇಟಿಂಗ್‌ವುಳ್ಳ ವಿದ್ಯುತ್ ಉಪಕರಣಗಳನ್ನೇ ಖರೀದಿಸುವುದು.
4. ಹೊಸ ಬೀದಿ ದೀಪ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ಅಥವಾ ಹೆಚ್ಚುವರಿ ಹೊರೆ ಮಂಜೂರು

ಮಾಡುವ ಸಂದರ್ಭಗಳಲ್ಲಿ ಎಲ್.ಇ.ಡಿ ಲ್ಯಾಂಪ್/ ಇಂಧನ ದಕ್ಷತೆಯುಳ್ಳ ದೀಪಗಳನ್ನೇ ಅಳವಡಿಸಿರುವುದನ್ನು ಖಾತರಿಪಡಿಸಿದ ನಂತರವೇ ಸದರಿ ಸ್ಥಾವರಗಳಿಗೆ ಸಂಪರ್ಕ ಕಲ್ಪಿಸುವುದು . ಸಂಬಂಧಿಸಿದ ಕಾರ್ಯ ಮತ್ತು ಪಾಲನಾ ವ್ಯಾಪ್ತಿಯ ಅಧೀಕ್ಷಕ ಇಂಜಿನಿಯರ್(ವಿ)/ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು random basis ನಲ್ಲಿ ಸದರಿ ಸ್ಥಾವರಗಳನ್ನು ಪರಿಶೀಲಿಸಿ ಕ್ಷೇತ್ರದಲ್ಲಿ ಕೆಇಆರ್‌ಸಿ ನಿರ್ದೇಶನಗಳನ್ನು ಪಾಲಿಕೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

5. ಗಂಗಾ ಕಲ್ಯಾಣ/ಇತರೆ ನೀರಾವರಿ ಸ್ಥಾವರ, ಕುಡಿಯುವ ನೀರು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ / ಹೆಚ್ಚುವರಿ ಹೊರೆ ಮಂಜೂರು ಮಾಡುವಾಗ ಸ್ಟಾರ್ ರೇಟೆಡ್ ಪಂಪುಗಳನ್ನು ಅಳವಡಿಸಿರುವ ಕುರಿತು ಖಡ್ಡಾಯವಾಗಿ ದಾಖಲೆಗಳನ್ನು ಪಡೆಯುವುದು.
6. ವಿದ್ಯುತ್ ಉಳಿತಾಯದ ಕುರಿತು ಗ್ರಾಹಕರಲ್ಲಿ ಅರಿವು ಮೂಡಿಸಲು ಗ್ರಾಹಕರಿಗೆ ವಿದ್ಯುತ್ ಮಂಜೂರಾತಿ ಪತ್ರಗಳನ್ನು ನೀಡುವಾಗ ವಿದ್ಯುತ್ ಉಳಿತಾಯದ ಕುರಿತು ಮಂಜೂರಾತಿ ಪತ್ರದಲ್ಲಿ ಈ ಕೆಳಕಂಡ ಅಂಶವನ್ನು ಅಳವಡಿಸಲು ಕ್ರಮ ಕೈಗೊಳ್ಳುವುದು.

- "To save energy and environment, use only LED Bulbs/ LED Tubelights/ Energy Efficient Water Heaters/ BEE Star rated house appliances such as Refrigerators, Fans, Motors, TVs etc".
- "ವಿದ್ಯುತ್ ಮಿತ ಬಳಕೆಗೆ ಹಾಗೂ ಪರಿಸರ ರಕ್ಷಣೆಗೆ, ಎಲ್.ಇ.ಡಿ. ಬಲ್ಬ್, ಎಲ್.ಇ.ಡಿ. ಟ್ಯೂಬ್‌ಲೈಟ್ಸ್‌ಗಳನ್ನು ಹಾಗೂ ಇಂಧನ ದಕ್ಷತೆಯುಳ್ಳ (ಸ್ಟಾರ್ ರೇಟೆಡ್) ಗೃಹೋಪಯೋಗಿ ಉಪಕರಣಗಳಾದ ರೆಫ್ರಿಜರೇಟರ್, ಫ್ಯಾನ್ಸ್, ಮೋಟಾರ್, ಟಿ.ವಿ ಇತ್ಯಾದಿಗಳನ್ನೇ ಅಳವಡಿಸುವುದು."

7. ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕುರಿತು ಉಲ್ಲೇಖ (2) ಮತ್ತು (3)ರಲ್ಲಿ ಈಗಾಗಲೇ ತಿಳಿಸಿರುವಂತೆ, ಅಗತ್ಯತೆಗೆ ಅನುಸಾರವಾಗಿ ಕರ ಪತ್ರಗಳನ್ನು ವಿತರಿಸಲು, ಕಛೇರಿಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದು ಹಾಗೂ ಜನರಲ್ಲಿ ಇಂಧನ ಉಳಿತಾಯದ ಬಗ್ಗೆ ನಿರಂತರವಾಗಿ ಜಾಗೃತಿಯನ್ನು ಮೂಡಿಸುವುದು.
8. ಇಂಧನ ದಕ್ಷತೆಗೆ ಸಂಬಂಧಿಸಿದಂತೆ, ನಿಗದಿಪಡಿಸಿದ 1(ಎ) ರಿಂದ 1(ಇ)ವರೆಗಿನ ನಮೂನೆಗಳಲ್ಲಿ (ಲಗತ್ತಿಸಲಾಗಿದೆ) ವಿಭಾಗವಾರು/ವೃತ್ತವಾರು/ವಲಯವಾರು ವಿವರಗಳನ್ನು ಭರ್ತಿಮಾಡಿ ಕಾರ್ಪೊರೇಟ್ ಕಛೇರಿಗೆ ಸದರಿ ವಿವರಗಳನ್ನು ಪ್ರತೀ ತಿಂಗಳ 10 ನೇ ತಾರೀಕಿನ ಒಳಗಾಗಿ ಸಲ್ಲಿಸುವುದು.
9. ಇಂಧನ ದಕ್ಷತೆ ಮತ್ತು ಡಿ.ಎಸ್.ಎಂ.ಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಈ ಕೆಳಕಂಡ ಅಧಿಕಾರಿಗಳು ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವುದು;

- ವಲಯ ಕಛೇರಿ - ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಕಛೇರಿ)
- ವೃತ್ತ ಕಛೇರಿ - ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಕಛೇರಿ)
- ವಿಭಾಗ ಕಛೇರಿ - ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಕಛೇರಿ)

Bhagirath 18/8/21
ಅಧೀಕ್ಷಕ ಇಂಜಿನಿಯರ್(ವಿ)(ತಾಂತ್ರಿಕ),

ಮವಿಸಕಂ, ಮಂಗಳೂರು

ಪ್ರತಿಗಳು:

1. ಮುಖ್ಯ ಇಂಜಿನಿಯರ್ (ವಿದ್ಯುತ್), ಕಾರ್ಯ ಮತ್ತು ಪಾಲನಾ ವಲಯ , ಮವಿಸಕಂ, ಮಂಗಳೂರು/ಶಿವಮೊಗ್ಗ-ಸೂಕ್ತ

ಕ್ರಮಕ್ಕಾಗಿ-. ಕ್ರೋಢೀಕರಿಸಿರುವ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಪ್ರತೀ ತಿಂಗಳು ಸಲ್ಲಿಸಲು ಹಾಗೂ ಪ್ರಸ್ತುತ ಎಪ್ರಿಲ್-2021 ರಿಂದ ಜುಲೈ-2021 ರವರೆಗಿನ ಮಾಹಿತಿಯನ್ನು ಕಾರ್ಪೋರೇಟ್ ಕಛೇರಿಗೆ ಸಲ್ಲಿಸಲು ಕ್ರಮ ವಹಿಸುವಂತೆ ಕೋರಲಾಗಿದೆ.

2. ಅಧೀಕ್ಷಕ ಇಂಜಿನಿಯರ್(ವಿ) (ಖರೀದಿ)/(ವಾಣಿಜ್ಯ), ಆಡಳಿತ ಕಛೇರಿ, ಮವಿಸಕಂ, ಮಂಗಳೂರು
3. ಅಧೀಕ್ಷಕ ಇಂಜಿನಿಯರ್(ವಿ)(ಯೋಜನೆಗಳು), ಆಡಳಿತ ಕಛೇರಿ, ಮವಿಸಕಂ, ಮಂಗಳೂರು- ಅವಗಾಹನೆಗಾಗಿ ಹಾಗೂ ತಂತ್ರಾಂಶದಲ್ಲಿ ಲಭ್ಯವಿರುವ ಮಂಜೂರಾತಿ ಪತ್ರದಲ್ಲಿ (ಕ್ರಮ ಸಂಖ್ಯೆ: 6) ಸದರಿ ಅಂಶವನ್ನು ಅಳವಡಿಸಲು ಕೋರಲಾಗಿದೆ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮವಿಸಕಂ,- ಸೂಕ್ತ ಕ್ರಮಕ್ಕಾಗಿ
5. ಅಧೀಕ್ಷಕ ಇಂಜಿನಿಯರ್ (ವಿ)(ಸ್ಕಾಡಾ)/(ಎಂ.ಆರ್.ಟಿ)/(ಹೆಚ್.ಆರ್.ಡಿ.), ಮೆಸ್ಕಾಂ, ಮಂಗಳೂರು- ನಮೂನೆ (1 ಸಿ)ಯಲ್ಲಿ ವಿವರಗಳನ್ನು ನೇರವಾಗಿ ಕಾರ್ಪೋರೇಟ್ ಕಛೇರಿಗೆ ಸಲ್ಲಿಸುವುದು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ , ಮವಿಸಕಂ.,- ಪತ್ರದಲ್ಲಿ ವಿವರಿಸಿದಂತೆ ಕ್ರಮಗಳನ್ನು ಅನುಸರಿಸಲು ಹಾಗೂ ಮಂಜೂರಾತಿ ಪತ್ರದಲ್ಲಿ (ಕ್ರಮ ಸಂಖ್ಯೆ: 6) ಸದರಿ ವಿಷಯವನ್ನು ಅಧೀನ ಉಪವಿಭಾಗಗಳಲ್ಲಿಯೂ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.
7. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು(ತಾಂತ್ರಿಕ), ಆಪ್ತ ಕಾರ್ಯದರ್ಶಿಗಳು- ಮುಖ್ಯ ಆರ್ಥಿಕ ಅಧಿಕಾರಿ/ಆರ್ಥಿಕ ಸಲಹೆಗಾರರು (ಆಂ.ಪ)/ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ), ಆಡಳಿತ ಕಛೇರಿ, ಮವಿಸಕಂ, ಮಂಗಳೂರು

1. ನಮೂನೆ: 1(ಎ) – ಹೊಸದಾಗಿ ಸಂಪರ್ಕ ಕಲ್ಪಿಸಿದ ಬೀದಿ ದೀಪ ಸ್ಥಾವರಗಳು

ಮಾಹೆ:-___________

| ವೃತ್ತ | ವಿಭಾಗ | ಉಪವಿಭಾಗ | ಹೊಸದಾಗಿ ಸಂಪರ್ಕ ನೀಡಿರುವ ಸ್ಥಾವರಗಳ ಸಂಖ್ಯೆ | | | ಎಲ್.ಇ.ಡಿ/ ಇಂಧನ ದಕ್ಷತೆಯುಳ್ಳ ದೀಪಗಳನ್ನು ಅಳವಡಿಸದಿರುವುಕ್ಕೆ ಕಾರಣಗಳು | ಷರಾ |
|---|---|---|---|---|---|---|---|
| | | | ವಿದ್ಯುತ್ ಹೊರೆ (KW) | ಅಳವಡಿಸಿರುವ ಒಟ್ಟು ದೀಪಗಳ ಸಂಖ್ಯೆ | ಅಳವಡಿಸಿರುವ ಎಲ್.ಇ.ಡಿ/ ಇಂಧನ ದಕ್ಷತೆಯುಳ್ಳ ದೀಪಗಳ ಸಂಖ್ಯೆ | | |
| 1 | 2 | 3 | 4 | 5 | 6 | 7 | 8 |
| | | | | | | | |

2. ನಮೂನೆ: 1-(ಬಿ) – ಹೆಚ್ಚುವರಿ ಹೊರೆ ಮಂಜೂರು ಮಾಡಿರುವ ಬೀದಿ ದೀಪ ಸ್ಥಾವರಗಳು

ಮಾಹೆ:-___________

| ವೃತ್ತ | ವಿಭಾಗ | ಉಪವಿಭಾಗ | ಹೆಚ್ಚುವರಿ ಹೊರೆ ನೀಡಿರುವ ಸ್ಥಾವರಗಳ ಸಂಖ್ಯೆ | | | ಎಲ್.ಇ.ಡಿ/ ಇಂಧನ ದಕ್ಷತೆಯುಳ್ಳ ದೀಪಗಳನ್ನು ಅಳವಡಿಸದಿರುವುಕ್ಕೆ ಕಾರಣಗಳು | ಷರಾ |
|---|---|---|---|---|---|---|---|
| | | | ಹೆಚ್ಚುವರಿ ವಿದ್ಯುತ್ ಹೊರೆ (KW) | ಅಳವಡಿಸಿರುವ ಒಟ್ಟು ದೀಪಗಳ ಸಂಖ್ಯೆ | ಅಳವಡಿಸಿರುವ ಎಲ್.ಇ.ಡಿ/ ಇಂಧನ ದಕ್ಷತೆಯುಳ್ಳ ದೀಪಗಳ ಸಂಖ್ಯೆ | | |
| 1 | 2 | 3 | 4 | 5 | 6 | 7 | 8 |
| | | | | | | | |

3. ನಮೂನೆ: 1-(ಸಿ) – ಮೆಸ್ಕಾಂ ಕಛೇರಿಗಳಲ್ಲಿ ಎಲ್.ಇ.ಡಿ ಬಲ್ಬ್/ಟ್ಯೂಬ್ ಲೈಟ್/ಬಿ.ಇ.ಇ 5 ಸ್ಟಾರ್ ರೇಟಿಂಗ್‌ವುಳ್ಳ ಅಳವಡಿಸಲಾದ ವಿದ್ಯುತ್ ಉಪಕರಣಗಳ ವಿವರ;

ಮಾಹೆ: __________

| ವಲಯ/ ವೃತ್ತ/ ವಿಭಾಗ/ ಉಪವಿಭಾಗ/ಶಾಖಾ ಕಛೇರಿ/Service Stations/33KV ಉಪಕೇಂದ್ರಗಳು/ಉಗ್ರಾಣಗಳು/ ಮಾ .ಸಂ.ಅ/CCC/ಸ್ಕಾಡಾ/ಎಂ.ಆರ್.ಟಿ ಕಛೇರಿಗಳು ಇತರೆ | ಎಲ್.ಇ.ಡಿ ಬಲ್ಬುಗಳು (ಸಂಖ್ಯೆಗಳಲ್ಲಿ) | ಎಲ್.ಇ.ಡಿ ಟ್ಯೂಬ್‌ಲೈಟ್‌ಗಳು (ಸಂಖ್ಯೆಗಳಲ್ಲಿ) | ಇಂಧನ ದಕ್ಷತೆಯುಳ್ಳ ಫ್ಯಾನ್‌ಗಳು (ಸಂಖ್ಯೆಗಳಲ್ಲಿ) | ಬಿ.ಇ.ಇ 5 ಸ್ಟಾರ್ ರೇಟಿಂಗ್‌ವುಳ್ಳ ವಿದ್ಯುತ್ ಉಪಕರಣ | | |
|---|---|---|---|---|---|---|
| | | | | ಹವಾನಿಯಂತ್ರಣ ಉಪಕರಣ(AC) | ಪಂಪುಸೆಟ್‌ಗಳು | ಇತರೆ |
| 1 | 2 | 3 | 4 | 5 | 6 | 7 |
| | | | | | | |

4. ನಮೂನೆ: 1-(ಡಿ) – ಹೊಸದಾಗಿ ಸಂಪರ್ಕಿಸಲಾದ ಪಂಪುಸೆಟ್‌ಗಳು

ಮಾಹೆ: __________

| ವೃತ್ತ | ವಿಭಾಗ | ಉಪವಿಭಾಗ | ಹೊಸದಾಗಿ ಸಂಪರ್ಕ ನೀಡಲಾದ ಪಂಪು ಸೆಟ್‌ಗಳು | | | | | ಬಿ.ಇ.ಇ 5 ಸ್ಟಾರ್ ರೇಟಿಂಗ್‌ವುಳ್ಳ ಪಂಪುಗಳನ್ನು ಅಳವಡಿಸಿರುವ ಸಂಖ್ಯೆ | | | |
|---|---|---|---|---|---|---|---|---|---|---|---|
| | | | GK | UNIP/Gen IP | SCP IP | TSP IP | ಒಟ್ಟು | GK | UNIP/Gen IP | SCP IP | TSP IP |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

5. ನಮೂನೆ: 1-(ಇ) – ಕುಡಿಯುವ ನೀರು ಸ್ಥಾವರಗಳು

ಮಾಹೆ: __________

| ವೃತ್ತ | ವಿಭಾಗ | ಉಪವಿಭಾಗ | ಹೊಸದಾಗಿ ಸಂಪರ್ಕ ನೀಡಿದ ಕುಡಿಯುವ ನೀರು ಸ್ಥಾವರಗಳು | ಬಿ.ಇ.ಇ 5 ಸ್ಟಾರ್ ರೇಟಿಂಗ್‌ವುಳ್ಳ ಕುಡಿಯುವ ನೀರು ಸ್ಥಾವರಗಳನ್ನು ಅಳವಡಿಸಿರುವ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| | | | | |